## ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಾರವಾರ

**ಸಿ.ಸಿ. ನಂ. 361/16**

ಚಾ.ಸಾ. 40

ಪ್ರಾ.ಸಾ. 39

| | | |
|---|---|---|
| ಸಾಕ್ಷಿದಾರರ ಹೆಸರು | – | ವೆಂಕಟ್ರಮಣ ಕಿಮಾನಿಕರ |
| ತಂದೆಯ ಹೆಸರು | – | ಸೋರು ಕಿಮಾನಿಕರ |
| ವಯಸ್ಸು | – | 40 ವರ್ಷ |
| ಉದ್ಯೋಗ | – | ಗುತ್ತಿಗೆದಾರ |
| ವಾಸ್ತವ್ಯ | – | ಕಿಮಾನಿ, ಕುಮಟಾ ತಾಲೂಕ |

(ಇಂದು ದಿನಾಂಕಃ 15–12–2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆಃ ಮಾನ್ಯ ಹಿರಿಯ ಸ.ಸ.ಅ. ರವರಿಂದಃ**

7 ನೇ ಆರೋಪಿಯ ಪರಿಚಯ ಇದೆ. ಉಳಿದ ಆರೋಪಿತರ ಪರಿಚಯ ಇಲ್ಲ. ಆರೋಪಿತರು ನನ್ನ ಕಡೆಯಿಂದ ಯಾವುದೇ ಹಣವನ್ನು ಪಡೆದಿಲ್ಲ. ಟಿ.ಸಿ.ಹೆಚ್. ಸೀಟಿಗಾಗಿ ನಾನು ಆರೋಪಿತರನ್ನು ಭೆಟ್ಟಿಯಾಗಿಲ್ಲ ಮತ್ತು ಯಾವುದೇ ಹಣವನ್ನು ನೀಡಿಲ್ಲ, ದಾಖಲಾತಿಯನ್ನು ಕೊಟ್ಟಿಲ್ಲ, ನನಗೆ ಮೋಸ ಮಾಡಿಲ್ಲ. ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಮಾನ್ಯ ಹಿರಿಯ ಸ.ಸ.ಅ. ರವರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಹಿರಿಯ ಸ.ಸ.ಅ. ರವರಿಂದಃ**

2002 ನೇ ಸಾಲಿನಲ್ಲಿ ನನಗೆ ಯಾವುದೇ ಸರಕಾರಿ ನೌಕರಿ ಇಲ್ಲದ ಕಾರಣ ನಾನು ಸರಕಾರಿ ನೌಕರಿ ಹುಡುಕಾಟದಲ್ಲಿ ಇದ್ದೆ ಎಂದರೆ ಸರಿಯಲ್ಲ. ಆಗ 7 ನೇ ಆರೋಪಿ ನನಗೆ ಭೆಟ್ಟಿಯಾಗಿ ನನಗೆ ದೊಡ್ಡ ದೊಡ್ಡ ಅಧಿಕಾರಿಗಳ ಮತ್ತು ರಾಜಕಾರಣಿಗಳ ಪರಿಚಯವಿದ್ದು, ನೌಕರಿ ಕೊಡಿಸುತ್ತೇನೆ ಅದಕ್ಕೆ

ರೂ. 50,000-00 ಹಣ ಖರ್ಚಾಗುತ್ತದೆ, ಕೊಡಬೇಕಾಗುತ್ತದೆ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ನಂತರ ಸದರಿಯವರು ಕುಮಟಾದ ಪಾಂಡುರಂಗ ಹೋಟೆಲ್‌ನಲ್ಲಿ 7 ನೇ ಆರೋಪಿ ಉಳಿದ ಆರೋಪಿತರನ್ನು ಪರಿಚಯಿಸಿ ನನಗೆ ಸಮಾಜ ಕಲ್ಯಾಣ ಇಲಾಖೆಯಲ್ಲಿ ನೌಕರಿ ಕೊಡಿಸುವುದಾಗಿ ಭರವಸೆ ನೀಡಿದ್ದರು ಎಂದರೆ ಸರಿಯಲ್ಲ. ಈ ಸಂಬಂಧವಾಗಿ ನಾನು ಮತ್ತು ನನ್ನ ಸ್ನೇಹಿತರು ಸೇರಿ ಒಟ್ಟೂ ರೂ. 44,000-00 ನೀಡಿರುತ್ತೇವೆ ಎಂದರೆ ಸರಿಯಲ್ಲ. ನಂತರ ಆರೋಪಿತರು ನಮಗೆ ಮರಳಿ ಹಣವನ್ನು ಮತ್ತು ದಾಖಲಾತಿಯನ್ನು ನೀಡದೇ, ನೌಕರಿಯನ್ನೂ ಕೊಡಿಸದೇ ನನಗೆ ಮೋಸ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ದಿನಾಂಕಃ 29-05-2002 ರಂದು ನಾನು ---------- ಖಾತ್ರಿಯಾಯಿತು ಎಂದು ಈಗ ಓದಿ ಹೇಳಿದಂತೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿ.ಪಿ. 39 ಎಂದು ಗುರುತಿಸಲಾಯಿತು. ಎಲ್ಲಾ ವಿಷಯಗಳು ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಡಿ.ವಿ.ಜಿ ವಕೀಲರಿಂದಃ</u>**

ಏನೂ ಇಲ್ಲ ಎಂದು ತಿಳಿಸಿರುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಮುಖ್ಯ ನ್ಯಾಯಿಕ ದಂ. ಕಾರವಾರ